ಸವರಿದೆ. ಹಾಗೆಯೇ ಅದರ ಮೇಲೆ ಕುಳಿತೆ. ನೆಲಕ್ಕೆ ಕಾಲು ಚಾಚಿ ಕುಳಿತೆ. 'ಹಾಯ್... ಎಷ್ಟೊಂದು ಮಜವಾಗಿದೆ' ಎನ್ನಿಸಿತು.

ತುಸು ಹೊತ್ತು ಆ ಆರಾಮ ಕುರ್ಚಿಯಲ್ಲಿ ಕುಳಿತೇ ಇದ್ದೆ.

ತುಸು ಹೊತ್ತು ಸರಿಯಿತು. ರಾಯರೊಂದಿಗೆ ಮಾತನಾಡಿ ಬರುತ್ತೇನೆ ಎಂದು ಹೇಳಿ ಕೋಣೆಯ ಒಳಗೆ ಹೋಗಿದ್ದ ಚಿಕ್ಕಮ್ಮ ಬರಲಿಲ್ಲ.

ಆರಾಮು ಕುರ್ಚಿಯಿಂದ ಮೇಲೆದ್ದೆ. ಮೊದಲು ಕುಳಿತಿದ್ದ ಕುರ್ಚಿಯ ಮೇಲೇ ಬಂದು ಕುಳಿತೆ.

ಮತ್ತೆ ತುಸು ಹೊತ್ತು ಸರಿದರೂ ಚಿಕ್ಕಮ್ಮ ಬರಲಿಲ್ಲ.

ರಾಯರ ಮನೆಗೆ ಬರುವ ಹಾದಿಯನ್ನು ನೋಡಿಯೇ ನನಗೆ ಇಲ್ಲಿಗೆ ಬರಲು ಮನಸ್ಸಿರಲಿಲ್ಲ: ಅಷ್ಟು ಗಲೀಜಾಗಿತ್ತು ಹಾದಿ. ಚಕ್ಕಡಿ ಓಡಾಡುವ ಕಿರು ರಸ್ತೆ: ರಸ್ತೆಯ ತುಂಬಾ ಗುಂಡಿ, ತಗ್ಗು. ಜೊತೆಗೆ ಹಾದಿಯ ಆಚೀಚೆ ಬದಿ ಹೇಲಿನ ಗುಪ್ಪೆಗಳು. ಹಾದಿಯ ನಡುನಡುವೆ ಆಕಳ ಸಗಣಿ, ಮೂತ್ರದ ಧಾರೆ. ಅದರ ಮೇಲೆ ಹಾರಾಡುವ ನೊಣಗಳು. ಗಬ್ಬು ನಾರುತ್ತಿತ್ತು ಹಾದಿ. 'ಛೀ... ಇಂಥಾ ಹಾದಿಯಲ್ಲಿ ಯಾಕೆ ಹೋಗುವುದು ಚಿಕ್ಕಮ್ಮಾ... ಹೇಗೆ ಹೋಗುವುದು?' ಎಂದು ಚಿಕ್ಕಮ್ಮನನ್ನು ಗಟ್ಟಿಯಾಗಿ ಕೇಳಿದ್ದೆ.'ಇಂಥಾ ಗಲೀಜು ಹಾದಿಯಲ್ಲಿ ಹೋಗಿ ಆ ಭಾಸ್ಕರರಾಯ ಅನ್ನುವವರನ್ನು ಕಾಣುವ ಅಂಥಾ ಘನಂಧಾರಿ ಕೆಲಸವಾದರೂ ಚಿಕ್ಕಮ್ಮನಿಗೆ ಯಾವುದು ಇದ್ದಿರಬಹುದು?' ಎನ್ನುವ ಪ್ರಶ್ನೆಯೂ ನನ್ನಲ್ಲಿ ಸುಳಿದಿತ್ತು. ಆದರೆ, ಆ ಪ್ರಶ್ನೆಯನ್ನು ಕೇಳುವ ಧೈರ್ಯ ನನಗೆ ಬಂದಿರಲಿಲ್ಲ. ಅದಕ್ಕೆ ಕಾರಣ ದಿನಕ್ಕೆ ಕನಿಷ್ಠ ಹತ್ತು ಬಾರಿಯಾದರೂ ನನ್ನ ಚಿಕ್ಕಮ್ಮ ಈ ಭಾಸ್ಕರರಾಯ ಎನ್ನುವವರ ಹೆಸರನ್ನು ಹೇಳುವುದು ಮತ್ತು ಇವರ ಗುಣಗಾನ ಮಾಡುವುದು.

'ನಮ್ಮ ಈ ಮಂದಳ್ಳಿ ಮತ್ತು ಆಸುಪಾಸಿನ ಊರುಗಳಲ್ಲಿ ವಳಗೆರೆಯ ಆ ಭಾಸ್ಕರರಾಯರಂಥ ಇನ್ನೊಬ್ಬರು ಯಾರಿದ್ದಾರೆ? ಜನರ ಕಷ್ಟ ಸುಖಗಳಿಗೆ ಒದಗುವವರು ಅಂದರೆ ಅವರೊಬ್ಬರೇ... ಆ ಭಾಸ್ಕರರಾಯರು. ತಮ್ಮ ಕಷ್ಟ, ದುಃಖ, ದುಮ್ಮಾನ ಹೇಳಿಕೊಂಡು ಬರುವ ಎಲ್ಲರಿಗೂ ಸಮಾಧಾನ ಹೇಳುತ್ತಾರೆ. ಕಷ್ಟ ಪರಿಹಾರಕ್ಕೆ ಮುಂದಾಗುತ್ತಾರೆ. ಸಾಧ್ಯವಾದಷ್ಟು ಹಣಕಾಸಿನ ನೆರವನ್ನೂ ನೀಡುತ್ತಾರೆ. ಅದೇ ನಿನ್ನ ಅಪ್ಪ ಅಮ್ಮ ನಂದೋಡಿ ಹೊಳೆಯ ನೀರಿನ ಸೆಳತದಲ್ಲಿ ತೇಲಿಹೋದಾಗ ಅವರಿಬ್ಬರ ಹೆಣ ಹುಡುಕಲು ತಮ್ಮ ಆಳುಕಾಳುಗಳನ್ನು ಕಳುಹಿಸಿ ನೆರವು ನೀಡಿದ್ದರು. ಮಾತ್ರವಲ್ಲ ನಿನ್ನ ಅಪ್ಪ ಅಮ್ಮನ ಕ್ರಿಯಾಕರ್ಮ ನೆರವೇರಿಸಲು ಹಣಕಾಸನ್ನೂ ಕೊಟ್ಟಿದ್ದರು ಗೊತ್ತಾ? ಅಂಥವರನ್ನು ತಂಪು ಹೊತ್ತಿನಲ್ಲಿ ನೆನೆಯಬೇಕು' ಹೀಗೆ ಸಾಗುತ್ತಿತ್ತು ಚಿಕ್ಕಮ್ಮನಿಂದ ಭಾಸ್ಕರರಾಯರ ಗುಣಗಾನ.

ಅದು ಸರಿಯಪ್ಪಾ... ಈ ಭಾಸ್ಕರರಾಯರು ಒಳ್ಳೆಯವರೇ ಇದ್ದಿರಬಹುದು; ಜನರ ಕಷ್ಟ ನಷ್ಟಗಳನ್ನು ಪರಿಹರಿಸಲು ಮುಂದಾಗಲೂಬಹುದು. ಆದರೆ, ಇಂಥ ದೊಡ್ಡ ಮನುಷ್ಯರ ಮನೆಗೆ ಬರಲು ಸರಿಯಾದ ಒಂದು ಹಾದಿ ಬೇಡವೇ? ಇಂಥಾ ಗಲೀಜು ಹಾದಿಯಲ್ಲಿ ಚಿಕ್ಕಮ್ಮ ಯಾಕೆ ಪದೇಪದೇ ಬರುತ್ತಿರುತ್ತಾಳೆ? ಅವರನ್ನು... ಅದೇ ಈ ಭಾಸ್ಕರರಾಯ ಎನ್ನುವವರನ್ನು ಪದೇಪದೇ ಕಾಣುವ ಗರ್ಜು ನನ್ನ ಚಿಕ್ಕಮ್ಮನಿಗೆ ಏನಿದೆ?

ಈ ಭಾಸ್ಕರರಾಯ ಎನ್ನುವವರ ಮುಖವನ್ನು ನಾನು ಇದುವರೆಗೂ ಕಂಡದ್ದಿಲ್ಲ. ಇವರ ಬಗ್ಗೆ ಚಿಕ್ಕಮ್ಮನಿಂದ ಕೇಳಿದ್ದಷ್ಟೇ. 'ಪದೇಪದೇ ನೀನು ಆ ಭಾಸ್ಕರರಾಯರ ವಿಷಯ ಹೇಳುತ್ತಿರುತ್ತೀಯಲ್ಲಾ... ಅವರ ಗುಣಗಾನ ಮಾಡುತ್ತಿರುತ್ತೀಯಲ್ಲಾ... ಅವರ ಮನೆಗೂ